International Journal of Academic Research
ISSN: 2348-7666; Vol.11, Issue-1, January-March, 2024
Impact Factor: 6.023; email: drtvramana@yahoo.co.in

# ಜಾನಪದ ಸಾಹಿತ್ಯದಲ್ಲಿ ಸಂಕೇತಗಳು

**ಡಾ. ಮುನಿರಾಜ ಎ.**
ಸಹಾಯಕ ಪ್ರಾಧ್ಯಾಪಕರು, ಭಾಷಾ ವಿಭಾಗ–ಕನ್ನಡ, ಮದ್ರಾಸು ಕ್ರೈಸ್ತವ ಕಾಲೇಜು (ಸ್ವಾಯತ್ತ) ತಾಂಬರಂ, ಚೆನ್ನೈ

**ಪೀಠಿಕೆ**

ಜಾನಪದ ಸಾಹಿತ್ಯವು ಲಿಖಿತ ಸಾಹಿತ್ಯದ ತಾಯಿಬೇರು. ಇದು ಕನ್ನಡದ ಮಟ್ಟಿಗೇನೂ ಹೊರತಲ್ಲ. ಎಷ್ಟೋ ಕಾಲದವರೆಗೆ ಜಾನಪದ ಸಂಪತ್ತನ್ನು ಸಾಹಿತ್ಯವೆಂದು ಪರಿಗಣಿಸಿರಲಿಲ್ಲ ನಮ್ಮ ಪಂಡಿತ ಸಮೂಹ. ಆದರೆ ದಿನ ಕಳೆದಂತೆ ಅದರ ಪ್ರಾಮುಖ್ಯತೆಯನ್ನು ಅರಿತವರು ಅದರೆಡೆಗೆ ಮುಖ ಮಾಡಿದರು. ಇಂದು ಸಾಹಿತ್ಯದ ಸಾಲಿನಲ್ಲಿ ಜಾನಪದಕ್ಕೆ ವಿಶಿಷ್ಟವಾದ ಸ್ಥಾನವಿದೆ. ಸಹಸ್ರಾರು ವರ್ಷಗಳ ಮನುಷ್ಯ ಜೀವನದ ಅನುಭವದ ವಿವಿಧ ಮಜಲುಗಳನ್ನು ಹಲವಾರು ಪ್ರಕಾರಗಳಲ್ಲಿ ಎರಕ ಹೊಯ್ದು ಮೂರ್ತಗೊಳಿಸಿದ ಭವ್ಯ ಪ್ರತಿಮೆ ಜಾನಪದ. ಅಪ್ರತಿಮ ಕಲಾಕಾರರು ನಿಸ್ವಾರ್ಥವಾಗಿ ಇದಕ್ಕಾಗಿ ದುಡಿದಿದ್ದಾರೆ; ಅದರೊಂದಿಗೆ ಜೀವಿಸಿದ್ದಾರೆ. ಅದು ಬದುಕಿನ ಅವಿಭಾಜ್ಯ ಅಂಗ. ಲಿಖಿತ ಸಾಹಿತ್ಯಿಕರು ಜಾನಪದದಲ್ಲಿನ ಅನೇಕ ವಿಷಯ ವಸ್ತು, ರೀತಿ, ಮಟ್ಟು ಮುಂತಾದವುಗಳನ್ನು ಬಳಸಿಕೊಂಡು ಕಾವ್ಯ ರಚಿಸಿರುವುದನ್ನು ಕಾಣುತ್ತೇವೆ. ಇಷ್ಟೆಲ್ಲಾ ನಡೆದಿದ್ದರೂ ಇಂದಿಗೂ ಜಾನಪದದ ವಿಷಯದಲ್ಲಿ ಸಂಶೋಧನೆಗಳು ನಡೆಯುತ್ತಿರುವುದು ಅದರ ಸಮೃದ್ಧತೆಗೆ ಸಾಕ್ಷಿಯಾಗಿದೆ. ಕಥೆ, ಕಾವ್ಯ, ಒಗಟು, ಗಾದೆ, ಒಡಪು, ಕಥನ ಕಾವ್ಯ, ಸಂಕೇತ, ರೂಪಕ... ಹೀಗೆ ಇನ್ನೂ ಹಲವು ಪ್ರಕಾರಗಳು ನಮಗೆ ಯಥೇಚ್ಛವಾಗಿ ದೊರೆಯುತ್ತವೆ. ಅದರೊಟ್ಟಿಗೆ ಜಾನಪದ ಸಂಸ್ಕೃತಿಯ ಕಡೆಗೆ ವಾಲಿದರೆ ಅದೊಂದು ಮಹಾಸಮುದ್ರದಂತೆ ಗೋಚರಿಸುತ್ತದೆ. ಇಂತಹ ಜಾನಪದದ ಸಾಗರದಲ್ಲಿ ದೊರೆಯುವ ಒಂದೊಂದು ಮುತ್ತುಗಳನ್ನು ಕುರಿತು ಚರ್ಚಿಸುವುದು ಅನನ್ಯವೆನಿಸುತ್ತದೆ. ಇಂತಹ ಮುತ್ತುಗಳಲ್ಲಿ ಒಂದಾದ 'ಸಂಕೇತ'ಗಳು ಎನ್ನುವ ಪರಿಭಾಷೆಯ ಬಳಕೆಯನ್ನು ಕುರಿತಾಗಿ ಲೇಖನದಲ್ಲಿ ವಿಶ್ಲೇಷಿಸಲಾಗುತ್ತದೆ.

**ವಿಷಯ ನಿರೂಪಣೆ**

ಜಾನಪದರು ಒಳಗೊಂಡಿರುವ ಅನಂತ ವಿಷಯಗಳಲ್ಲಿ ಮನುಷ್ಯ ಜೀವನಕ್ಕೆ ಅತೀ ಮುಖ್ಯವಾದ ಪ್ರೇಮವೂ ಒಂದು. ಪ್ರೇಮ ಮತ್ತು ದಾಂಪತ್ಯವನ್ನು ಕುರಿತು ಜಾನಪದವು ಮುಕ್ತ ಮನಸ್ಸಿನಿಂದ ಮಾತನಾಡುತ್ತದೆ. ಇಲ್ಲಿ ಗಂಡುಹೆಣ್ಣಿನ ನಡುವೆ ಸಾಮರಸ್ಯವನ್ನು ಹೆಚ್ಚಿಸಲು ಸಂದರ್ಭವನ್ನು ಮತ್ತಷ್ಟು ರಸಮಯವಾಗಿಸಲು, ಈರ್ವರ ನಡುವಿನ ಬಂಧವನ್ನು ಗಾಢಗೊಳಿಸಲು ಹಲವಾರು ಸಾಂಕೇತಿಕ ಪದಗಳನ್ನು ಬಳಸಲಾಗುತ್ತದೆ. ಕೆಲವೊಮ್ಮೆ ಅಪರಿಚಿತರನ್ನು ಕಂಡಾಗ ಅವರ ಮೇಲೆ ಮೋಹವುಂಟಾಗಿ ಅವರೊಂದಿಗೆ ಮಾತನಾಡುವಾಗ ಇಂತಹ ಸಾಂಕೇತಿಕ ಪದಗಳನ್ನು ಬಳಸಿ ಮಾತನಾಡುವುದನ್ನು ಕಾಣುತ್ತೇವೆ. ಪ್ರೇಮಯಾಚನೆ ಮಾಡುವಾಗ ಕೇಳುವ ಪರಿಯು ಹೀಗಿರುತ್ತದೆ. ಎಳ್ಳು ಕೊಳ್ಳಲು ಬಂದ ಒಬ್ಬ ಬಣಜಿಗನನ್ನು ನಾರಿಯೊಬ್ಬಳು ಧಾರಣೆ ಕೇಳಿ ಬರಲು ತಿಳಿಸುತ್ತಾಳೆ. ಆಗ ಅವಳ ಮೇಲೆ ಮೋಹವುಂಟಾದ ಆ ಬಣಜಿಗನು

'ಧಾರಣೆ ಕೇಳಿ ಬಂದೆ ಒಳ್ಳೆ ಅಳೆಯೊ ಬಳ್ಳವ ತಂದೆ
ಕುಸುಮಾಲೆ ಎಳ್ಳ ಅಳಕೊಡೇ – ತಂ
ದನಿ ತಾನಂದೋ ತಂದತಾನೋ'

ದವಸ ಧಾನ್ಯಗಳನ್ನು ಅಳೆಯುವುದು ಮಿಲನದ ಸಂಕೇತವಾದರೆ, ಅಳೆದು ಕೊಡೆಂದು ಕೇಳುವುದು ಪ್ರೇಮಯಾಚನೆಯ ಸಂಕೇತ. ಮೇಲಾಗಿ ಅವನು ಆಕೆಯನ್ನು ಕುಸುಮಾಲೆ ಎಂದು ಹೊಸ ಹೆಸರನ್ನಿಟ್ಟು ಕರೆಯುತ್ತಿದ್ದಾನೆ. ಅದನ್ನು ಕೇಳಿದ ಆಕೆಯು ಹಾಗೆ ಕರೆಯ ಬೇಡೆಂದು, ಅದನ್ನು ಕೇಳಿದರೆ ಮನೆಯ ರಾಯರು ಶೂಲಕ್ಕೆ ಹಾಕಿ ಕೊಲ್ಲುತ್ತಾರೆಂದು ಹೇಳಿದರೂ ಆತ ಕೇಳಲೊಲ್ಲ. ಶೂಲಕ್ಕೆ ಹಾಕಿಸಿದರೂ, ನನ್ನ ಬಿಸಿನೆತ್ತರನ್ನು ಹರಿಸಿದರೂ ಸರಿಯೇ ನಾನು ಮಾತ್ರ ನಿನ್ನ ಬಂದಿಯ ತೋಳನ್ನು ಬಿಡಲಾರೆ ಎನ್ನುತ್ತಾನೆ. ಆಕೆಯ ಮೇಲಿನ ಮೋಹವನ್ನು ವ್ಯಕ್ತಪಡಿಸಲು ಆತ ಎಳ್ಳನ್ನು ಅಳೆದು ಕೊಡೆಂದು ಕೇಳುವುದು ಸಾಂಕೇತಿಕ ಪ್ರೇಮ ಭಾಷೆಯಾಗಿ ಮೂಡಿಬಂದಿರುವುದನ್ನು ಕಾಣುತ್ತೇವೆ

ಹಾಗೆಯೇ ನೀರನ್ನು ಹೆಣ್ಣಿಗೆ ಸಾಂಕೇತಿಕವಾಗಿ ಬಳಸುವ ಪರಿಪಾಠವೂ ಜಾನಪದರಲ್ಲುಂಟು.

ಬಾಗಿಲಗಿರುವೊಳೆ ಬಾರುದ್ದನ ಜಡೆಯೊಳೆ
ಬಾಗಿಲೊಳೊಮ್ಮೆ ಕರೆದವಳೆ ॥ಕೋಲು॥
ಬಾಗಿಲೊಳೊಮ್ಮೆ ಕರೆದವಳೆ । ಮಾವನ ಮಗಳೆ
ಬಾಯಾರಿ ಬಂದೆ ಕೊಡೆ ನೀರ ॥ಕೋಲು॥

ತಾನು ಬಾಯಾರಿ ಬಂದಿರುವುದು ಕೇವಲ ನೀರಿಗಾಗಿ ಅಲ್ಲ. ಅದು ನಿನ್ನ ಪ್ರೇಮದ ದಾಹವಾಗಿದೆ. ನಿನ್ನ ಒಲವನ್ನು ಬಯಸಿ ಬಂದೆನೆಂದು ಸಾಂಕೇತಿಕವಾಗಿ ಆತ ನುಡಿಯುತ್ತಿದ್ದರೆ, ಅದಕ್ಕೆ ಪ್ರತಿಯಾಗಿ ಆಕೆ ಹೀಗೆನ್ನುತ್ತಾಳೆ.

ನಾ ನೀರ ಕೊಡುವೋಕೆ ನೀನ್ಯಾರೊ ನಾನ್ಯಾರೋ
ಹೋಗಯ್ಯ ಹರಿಯೊ ಜಲಧಿಗೆ ॥ಕೋಲು॥
ಹರಿಯೊ ನೀರು ಹಚ್ಚಗೆ ಕೆರೆಯ ನೀರು ಕೆಂಪಗೆ
ಬಾವಿಯ ನೀರು ಬಗೆ ಬಗೆ ॥ಕೋಲು॥
ಬಾವಿಯ ನೀರು ಬಗೆ ಬಗೆ । ಮಾವನ ಮಗಳೆ
ನೀ ಕೊಟ್ಟ ನೀರು ಬಲುರುಚಿಯು ॥ಕೋಲು॥

ನೀರನ್ನು ಕೊಡಲು ನನಗೂ ನಿನಗೂ ಸಂಬಂಧವಿಲ್ಲ. ಅರ್ಥಾತ್ ನಾನು ಅಂತಹ ಹೆಣ್ಣಲ್ಲ. ನೀನು ಹರಿಯುವ ಜಲಧಿಗೆ ಹೋಗೆಂದು ತಿಳಿಸುತ್ತಾಳೆ. ಇಲ್ಲಿ ಹರಿಯುವ ನೀರನ್ನು ವೇಶ್ಯೆಗೆ ಸಂಕೇತವಾಗಿ ಬಳಸಿರುವುದನ್ನು ಕಾಣುತ್ತೇವೆ. ಅದಕ್ಕೆ ಆತ ಕೊಡುವ ಉತ್ತರವೂ ಮಾಧುರ್ಯವಾದುದು. ಹರಿಯುವ ನೀರು ಅಂದರೆ ವೇಶ್ಯೆಯರು ಎನಗೆ ಆಕರ್ಷಣಾಹೀನರಾಗಿರುವರು, ಕೆರೆಯ ನೀರು ಕೆಂಪಗೆ ಅಂದರೆ ವಿವಾಹಿತ ಮಹಿಳೆಯರ ಮೇಲೆ ಆಸಕ್ತಿ ಕಡಿಮೆಯಾಗಿದೆ, ಬಾವಿಯ ನೀರು ಬಗೆ ಬಗೆ ಅಂದರೆ ಅವಿವಾಹಿತ ಯೌವ್ವನದ ಹೆಣ್ಣುಗಳ ಮೇಲೆ ನನ್ನ ಮನಸ್ಸು ವಾಲಿದ್ದು, ಅದರಲ್ಲಿ ನೀನು ನನ್ನ ಮನಸ್ಸನ್ನು ಗೆದ್ದಿರುವೆ, ನೀನು ಕೊಟ್ಟ ನೀರು ಬಲುರುಚಿ ಎಂದಿರುವುದು ನೀನು ಕೊಡಲಿರುವ ನೀರು ಅಥವಾ ಸುಖ ಎಂಬರ್ಥವನ್ನೂ ಧ್ವನಿಸುತ್ತದೆ. ಆದಕಾರಣ ನಿನ್ನನ್ನು ಕೂಡುವ ತನಕ ಎನ್ನ ಮನಸ್ಸು ವಿಶ್ರಮಿಸುವುದಿಲ್ಲ ಎನ್ನುವುದು ಆತ ವ್ಯಕ್ತಪಡಿಸುವ ಅಭಿಪ್ರಾಯವಾಗಿದೆ.

ಹಾಗೆಯೇ ಹೆಣ್ಣು ತನ್ನ ಪ್ರಿಯಕರ ಸತ್ತನೆಂಬ ಸುದ್ಧಿಯನ್ನು ಕೇಳಿ ಪರಿತಪಿಸುವ ಸಂದರ್ಭವು ಮಾರ್ಮಿಕವಾಗಿ ಮೂಡಿಬಂದಿದೆ.

ಪಟ್ಟಣ್ ಸೆಟ್ಟೀ ಮಗಾ ಸತ್ನೆಂಬ್ ಸುದ್ದಿ ಕೇಳಿ
ಹೊತ್ತಿದ್ದ ಗಡಿಗೆ ಕೆಳಗ್ಹಾಕೀ – ಮುದ್ದು
ಕೋಲೂ ಕೋಲನ್ನ ಕೋಲೇ
ಹೊತ್ತಿದ್ದನೇ ಗಡಿಗೇ ಕೆಳಗಾಕಿ ಆ ಬಾಲೆ
ದುಃಖಾ ಮಾಡ್ಯಾಳೇ ಹೊಳೆಯಾಗೆ – ಮುದ್ದು
ಕೋಲು ಕೋಲನ ಕೋಲೆ – ಕೋಲು

ತಾನು ಗುಪ್ತವಾಗಿ ಸಂಬಂಧ ಬೆಳೆಸಿದ್ದ ಗೆಣೆಕಾರ ಇನ್ನಿಲ್ಲವೆಂಬ ಸುದ್ಧಿಯು ಆಕೆಗೆ ಆಘಾತವಾಗಿ ಪರಿಣಮಿಸುತ್ತದೆ. ಒಡನೆಯೇ ತಾನು ಹೊತ್ತಿದ್ದ ಗಡಿಗೆಯನ್ನು ನುಚ್ಚು ನೂರಾಗುವಂತೆ ಕುಕ್ಕಿ ಗೋಳೋ ಎಂದು ಅಳುತ್ತಾಳೆ; ಶೋಕಿಸುತ್ತಾಳೆ. ಇದನ್ನು ಕಂಡ ಗೆಣೆಗಾತಿಯರು

ಚಿನ್ನದ ಕೊಡನಲ್ಲ ಕನ್ನದ ಕೊಡನಲ್ಲ
ಮಣ್ಣಿನ ಕೊಡಕ್ಯಾಕಿಷ್ಟು ಅಳತೀಯೆ

ಎಂದು ಕೇಳಿದಾಗ ಆಕೆ ಹೇಳುವ ಉತ್ತರ ಸಾಂಕೇತಿಕವಾಗಿ ತನ್ನ ಪ್ರಿಯಕರನನ್ನು ಸೂಚಿಸುತ್ತದೆ.

ಅತ್ತೆ ಕಾಣದ್ಹಾಂಗೇ ಮಾವ ನೋಡದ್ಹಾಂಗೇ
ಒಪ್ಪದಲಿ ನಾನು ಬಳಸಿದ್ದೆ...
ಒಪ್ಪದಲಿ ನಾನು ಬಳಸಿದಂಥಾ ಹರವಿ
ನುಚ್ಚಾಯ್ತು ನೀರ ಹೊಳಿಯಾಗೇ...

ತಾನು ಹೇಳುತ್ತಿರುವ ಕೊಡವು ಚಿನ್ನದ, ಬೆಳ್ಳಿಯ, ಮಣ್ಣಿನ ಕೊಡವಲ್ಲ. ಇವೆಲ್ಲಕ್ಕಿಂತಲೂ ಅಮೂಲ್ಯವಾದ ತನ್ನ ಜೀವದ ಕೊಡ ಎಂಬ ಸಾಂಕೇತಿಕ ಪರಿಭಾಷೆಯ ಮೂಲಕ ಹೆಣ್ಣು ತನ್ನ ಗೆಣೆಕಾರನನ್ನು ಸೂಚಿಸುತ್ತಿರುವಳು.

ಹಾಗೆಯೆ ಭೂಮಿಯನ್ನು ಹೆಣ್ಣಿಗೆ ಹೋಲಿಸುವ ಪರಿಪಾಠವನ್ನು ಜಾನಪದರಲ್ಲಿ ಕಾಣುತ್ತೇವೆ. ಭೂಮಿಯಷ್ಟು ತಾಳ್ಮೆಯುಳ್ಳವಳು ಎಂದು ಹೇಳುತ್ತಾ ಭೂಮಿಯನ್ನು ಉಳುವ ನೇಗಿಲನ್ನು ಗಂಡಿಗೆ ಹೋಲಿಸುವುದನ್ನು ಸಾಂಕೇತಿಕವಾಗಿ ಕಂಡುಬರುತ್ತದೆ. ಭೂಮಿಯನ್ನು ಉತ್ತು ಬೆಳೆಯನ್ನು ಬೆಳೆಯಲು ಬಿತ್ತನೆ ಮಾಡುವ ಕಾರ್ಯವನ್ನು ಗರ್ಭ ದಾನದ ಸಂಕೇತಗಳಾಗಿಯೂ ಹೇಳುವುದುಂಟು. ಇದಕ್ಕೆ ಪೂರಕವಾಗಿ ಬೆಳೆ ಬರಲು ಅವಶ್ಯವಾದ ಮಳೆಯನ್ನೂ ಸಹ ಇಲ್ಲಿ ಹೆಸರಿಸುವುದುಂಟು.

ಎದ್ದಿದ್ದ ಮೋಡುಂಟು ಎರಗೋರೆ ಸಿಡಿಲುಂಟು
ಗದ್ದಲಿಸಿ ಹುಯ್ಯೋ ಮಳೆಯುಂಟು – ರಾಜನವ
ನಿಮ್ಮ ರಾಯರು ಬಿತ್ತಿ ಬೆಳೆದಾರೆ.

ಇಲ್ಲಿ ಮೋಡ, ಸಿಡಿಲು, ಗುಡುಗುಗಳು ಗೆಣೆಯ ಗೆಣತಿಯರು ಕೂಡುವ ಮುನ್ನಲಿವಿನ ಸಂಕೇತಗಳಾದರೆ 'ಮಳೆ'ಯು ಮಿಲನದ ಸಂಕೇತವಾಗಿದೆ. ಮತ್ತೊಂದು ಅರ್ಥದಲ್ಲಿ ಭೂಮಿ ಆಕಾಶಗಳು ಹೆಣ್ಣು–ಗಂಡಿನ ಸಂಕೇತಗಳಾಗಿ ಕಾಣಲ್ಪಡುತ್ತವೆ. ಅಂತೆಯೇ ಹಣ್ಣುಗಳನ್ನೂ ಸಹ ಸಂಕೇತಗಳಾಗಿ ಬಳಸಿರುವುದನ್ನು ಜಾನಪದ ಸಾಹಿತ್ಯದಲ್ಲಿ ಕಾಣುತ್ತೇವೆ. ಇವು ಸ್ತ್ರೀಯರಿಗೆ ಹಾಗೂ ಸ್ತ್ರೀಯರ ವಯಸ್ಸಿಗೆ ಸಂಕೇತಗಳಾಗಿ ಕಂಡುಬರುತ್ತವೆ.

ನಿಂಬೆಯ ವನದಾಗೆ ರಂಬೇರೊಡ್ಡೋಲಗ...
ಕಿತ್ತಳೆ ವನದಾಗೆ ಮಿತ್ರೇರೊಡ್ಡೋಲಗ...
ಕಂಚಿಯ ವನದಾಗೆ ಕೆಂಚೇರೊಡ್ಡೋಲಗ...
(ಇತ್ಯಾದಿ)

ಇಲ್ಲಿ ಸೂಚಿತವಾಗಿರುವ ಹಣ್ಣುಗಳು ಕೇವಲ ಆಯಾ

International Journal of Academic Research
ISSN: 2348-7666; Vol.11, Issue-1, January-March, 2024
Impact Factor: 6.023; email: drtvramana@yahoo.co.in

ವನಗಳಲ್ಲಿರುವ ಹೆಣ್ಣುಗಳನ್ನು ಸೂಚಿಸುವುದಲ್ಲ ಅಥವಾ ಆಯಾ ಹಣ್ಣುಗಳ ಬಣ್ಣಗಳು ಆಯಾ ವನಗಳಲ್ಲಿನ ಹೆಣ್ಣುಗಳ ಮೈಬಣ್ಣಗಳನ್ನಷ್ಟೇ ಸೂಚಿಸುತ್ತಿಲ್ಲ. ಬದಲಿಗೆ ಆಯಾ ಹಣ್ಣುಗಳ ಆಕಾರ ಮತ್ತು ಗಾತ್ರಗಳು ಆ ವನಗಳಲ್ಲಿರುವ ಮೊಲೆಗಳನ್ನು ಸೂಚಿಸುತ್ತಾ, ಆ ಮೂಲಕ ಅವರ ವಯಸ್ಸನ್ನು ಸಾಂಕೇತಿಕವಾಗಿ ಉಲ್ಲೇಖಿಸುತ್ತಿವೆ. ಬಹಳ ಸಣ್ಣವಿರುವ ನಿಂಬೆಹಣ್ಣು ಎಳೆ ಚಿಗುರಿನ ಕಿಶೋರಿಯರನ್ನು ಸಂಕೇತಿಸಿದರೆ, ಕಿತ್ತಳೆ ಹಣ್ಣು ಬಿರುಯೌವ್ವನದ ತುಂಬಿದೆದೆಯ ಹೆಣ್ಣುಗಳನ್ನು ಸೂಚಿಸುತ್ತದೆ. ಹೀಗೆ ಇನ್ನೂ ಹತ್ತು ಹಲವಾರು ಸಂಕೇತಗಳು ಇಲ್ಲಿ ಕಂಡುಬರುತ್ತವೆ. ಫಲ ತುಂಬಿದ ಮರವನ್ನು ಬಿರು ಯೌವ್ವನದ ಹೆಣ್ಣಿಗೆ ಹೋಲಿಸಿ, ಅದರಲ್ಲಿ ಫಲ ಕೀಳಲು ಬಯಸುವುದು ಪ್ರೇಮಯಾಚನೆಯ ಸಂಕೇತವಾಗಿಯೂ, ಹಾಗೆ ಹಣ್ಣು ಕೀಳುವುದು ಮಿಲನದ ಸಂಕೇತವಾಗಿಯೂ ಕಾಣುತ್ತೇವೆ. ಮರದ ನೆರಳಿನಲ್ಲಿ ವಿಶ್ರಮಿಸಲು ಅವಕಾಶ ಕೇಳುವುದು ಯಾಚನೆಯ ಸಂಕೇತವಾದರೆ, ಮರದಡಿಯಲ್ಲಿ ಕೂಡುವುದು ಅಥವಾ ಕೊಂಬೆ ಮುರಿಯುವುದು ಮಿಲನದ ಸಂಕೇತಗಳಾಗಿವೆ. ಹಾಗೆಯೇ ದವಸ ಧಾನ್ಯಗಳನ್ನು ಕುಟ್ಟಲು ಬಯಸುವುದು ಪ್ರೇಮಯಾಚನೆಯ ಸಂಕೇತಗಳಾದರೆ, ಕುಟ್ಟುವುದು ಮಿಲನದ ಸಂಕೇತಗಳಾಗಿ ಕಂಡುಬರುತ್ತವೆ. ಒರಳನ್ನು ಹೆಣ್ಣಿಗೂ ಒನಕೆಯನ್ನು ಗಂಡಿಗೂ ಹೋಲಿಸುವ ಇಲ್ಲಿನ ಸಾಂಕೇತಿಕತೆ ಮಾರ್ಮಿಕವಾಗಿದೆ.

**ಉಪಸಂಹಾರ**

ಜಾನಪದ ಸಾಹಿತ್ಯದಲ್ಲಿ ಶೃಂಗಾರ ಅಥವಾ ಪ್ರೇಮದ ವಿಚಾರವು ಒಂದು ಅದ್ಭುತ ಹಾಗೂ ಅಮೋಘವಾಗಿ ಮೂಡಿಬಂದಿರುವ ವಿಷಯ ವಸ್ತುವಾಗಿದೆ. ಇಲ್ಲಿ ಅಸಭ್ಯ, ಅಶ್ಲೀಲತೆಯ ಗೆರೆ ಬಹಳ ತೆಳುವಾಗಿರುತ್ತದೆ. ಶೃಂಗಾರವನ್ನು ಅತ್ಯಂತ ಸಹಜವಾಗಿ ಕೊಂಡೊಯ್ಯುವ ಜನಪದರ ಮನಸ್ಥಿತಿಯು ಕಲುಷಿತಗೊಂಡಂತೆ ಕಾಣುವುದಿಲ್ಲ. ಅದು ಮನುಷ್ಯ ಬದುಕಿನ ಸಹಜ ಪ್ರಕ್ರಿಯೆ. ಪ್ರತಿಯೊಂದು ಜೀವಿಗೂ ಅದರಲ್ಲಿ ಆಸಕ್ತಿಯುಂಟು. ಅದನ್ನು ಅಲ್ಲಗಳೆಯುವ ಹಾಗಿಲ್ಲ. ಇಂತಹ ಶೃಂಗಾರ ಅಥವಾ ಪ್ರೇಮಮಯ ಬದುಕನ್ನು ನಡೆಸುವಾಗ ಅದನ್ನು ಅಪೇಕ್ಷಿಸುವುದು ಹಾಗೂ ಈಡೇರಿಸಿಕೊಳ್ಳುವುದು ಇವುಗಳು ಕೇವಲ ಯಾಂತ್ರಿಕವಾಗಿ ನಡೆಯುವ ಪ್ರಕ್ರಿಯೆಗಳಲ್ಲ. ಬದಲಿಗೆ ಅವು ಎರಡು ಜೀವಗಳ ಸಮ್ಮಿಲನ. ಇಲ್ಲಿ ನೈತಿಕ ಅನೈತಿಕತೆಯ ಪ್ರಶ್ನೆ ಗೌಣವಾಗುತ್ತದೆ. ಅದಕ್ಕೆ ಕಾರಣಗಳು ಹಲವಿರಬಹುದು. ಆದರೆ ನಾವು ಹುಡುಕಬೇಕಾದುದು ಇಲ್ಲಿ ಜನಪದರು ತೋರುವ ಜಾಣ್ಮೆಯನ್ನು. ಅನಕ್ಷರಸ್ಥರಾಗಿದ್ದರೂ ತಾವು ತಮ್ಮ ಬದುಕನ್ನು ಚಿತ್ರಿಸುವ ಬಗೆಯು ಯಾವ ಮಹಾನ್ ಕವಿಗೂ ಕಡಿಮೆಯೇನಲ್ಲ. ತಮ್ಮ ಸುತ್ತಲಿನ ಪರಿಸರದ ಸಹಜ ವಿಷಯಗಳನ್ನೇ ಬಳಸಿ, ಸಂಕೇತಗಳನ್ನು ರೂಪಿಸಿ ಅವುಗಳ ವ್ಯವಹರಿಸುವ ಚತುರತೆಗೆ ನಾವು ತಲೆ ಬಾಗಲೇಬೇಕಾಗುತ್ತದೆ.

**ಪರಾಮರ್ಶನ ಗ್ರಂಥಗಳು**

1. ಗೀತೆಗಳು, ಸಂ. ಮತಿಘಟ್ಟ ಕೃಷ್ಣಮೂರ್ತಿ, ಗುರುಮೂರ್ತಿ ಪ್ರಕಾಶನ, ಕೆಂಪೇಗೌಡ ನಗರ, ಬೆಂಗಳೂರು, ಮೊದಲ ಮುದ್ರಣ–1975.
2. ಕನ್ನಡ ಜಾನಪದ ಗೀತೆಗಳು, ಡಾ. ಬಿ.ಎಸ್. ಗದ್ದಗಿಮಠ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ತೃತೀಯ ಮುದ್ರಣ–1986.
3. ತ್ರಿಪದಿ, ರಗಳೆ ಮತ್ತು ಜನಪದ ಸಾಹಿತ್ಯ (ಸಾ. ಸಾ.ಚ – ಸಂಪುಟ–7), ಡಾ. ಕಾಳೇಗೌಡ ನಾಗವಾರ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ತೃತೀಯ ಮುದ್ರಣ–2008.
4. ಕನ್ನಡ ಸಾಹಿತ್ಯ ಸಮೀಕ್ಷೆ, ಡಾ. ಜಿ.ಎಸ್. ಶಿವರುದ್ರಪ್ಪ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ತೃತೀಯ ಮುದ್ರಣ–200